ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿದ ವಿವರ ಈ ಕೆಳಗಿನಂತಿದೆ.

(ಅ) 1996-97-ರೂ. 12.25 ಲಕ್ಷ

(ಆ) 1997-98-ರೂ. 6.36 ಲಕ್ಷ

ಬಾಕಿ ಬಿಲ್ಲು-ರೂ. 5.73 ಲಕ್ಷ

(ಇ) 1998-99-ರೂ. 3.50 ಲಕ್ಷ 9:98ರವರೆಗೆ

ಆ) ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳು ಮತ್ತು ತುರ್ತು ದುರಸ್ತಿ ಕಾಮಗಾರಿಗಳು

ಇ) 1) 4 ಇಂಚಿನ ಅಂಡರ್‌ಗ್ರೌಂಡ್ ಡ್ರೇನೇಜ್‌ನ ಪೈಪ್‌ಲೈನ್ ಅನ್ನು 9 ಇಂಚಿನ ಪೈಪ್‌ಲೈನ್‌ಗೆ ಬದಲಾಯಿಸುವುದು.

2) ಎಲ್ಲಾ ಶೌಚಾಲಯಗಳ ಪೈಪ್‌ಗಳನ್ನು (ಡೌನ್‌ಟೇಕ್) ಬದಲಾಯಿಸುವುದು.

3) 52 ಬ್ಲಾಕ್‌ಗಳಲ್ಲಿರುವ ಶೌಚಾಲಯಗಳ ದುರಸ್ತಿ

4) ಕಡಪಾ ಕಲ್ಲಿನಿಂದ ಆಸ್ಪತ್ರೆ ವಾರ್ಡ್ ಸುತ್ತಲೂ ಫ್ಲಾಗಿಂಗ್ ಮಾಡುವುದು.

5) ನೀರು ಸರಬರಾಜು ಮಾಡುವ ಪೈಪ್‌ಗಳನ್ನು ಬದಲಾಯಿಸುವುದು.

6) ಒಡೆದ ಕಿಟಕಿಗಳ ಗಾಜು ಮತ್ತು ಬಾಗಿಲುಗಳ ದುರಸ್ತಿ ಮಾಡುವುದು ಕಿಮ್ಸ್ ಆವರಣ ನಿರ್ವಹಣೆಗೆ ರೂ. 8.82 ಲಕ್ಷ ಹಾಗೂ ಆಸ್ಪತ್ರೆ ನಿರ್ವಹಣೆಗೆ ರೂ. 2.53 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಹುಬ್ಬಳ್ಳಿಯಲ್ಲಿರುವ ಸಹಕಾರಿ ವಸತಿ ಗೃಹಗಳು.

2875:(3860)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿರುವ ಸರಕಾರಿ ವಸತಿಗೃಹಗಳನ್ನು ಲೋಕೋಪಯೋಗಿ ಇಲಾಖೆಯ ವಸತಿಗೃಹಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ಕಳೆದ ಮೂರು ವರ್ಷಗಳಲ್ಲಿ ಆ ಬಗ್ಗೆ ಮಾಡಿದ ವೆಚ್ಚ ಎಷ್ಟು; ಈ ಕಾಮಗಾರಿಗಳು ಯಾವುವು? (ವಿವರ ನೀಡುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಸದರಿ ವಸತಿಗೃಹಗಳ ನಿರ್ವಹಣೆಯನ್ನು ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ಸರಿಯಾಗಿ ಮಾಡಲಾಗುತ್ತಿದೆ.

ಆ) ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ನಿರ್ವಹಿಸಲಾಗುತ್ತಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಮಾಡಿದ ವೆಚ್ಚ ಈ ಕೆಳಕಂಡಂತಿದೆ.

1995-96-ರೂ.9.94 ಲಕ್ಷ

1996-97-ರೂ. 12.07 ಲಕ್ಷ

1997-98- ರೂ.7.01 ಲಕ್ಷ ಸಾಮಾನ್ಯ ವಾರ್ಷಿಕ ದುರಸ್ತಿ ಕಾರ್ಯಗಳಾದ ಸುಣ್ಣ-ಬಣ್ಣ ಡ್ರೈನೇಜ್ ದುರಸ್ತಿ, ಬಾಗಿಲು ಕಿಟಕಿಗಳ ದುರಸ್ತಿ, ಸೋರುವಿಕೆ ತಡೆಯುವುದು ಇತ್ಯಾದಿಗಳಿಗೆ ಈ ಹಣವನ್ನು ಖರ್ಚು ಮಾಡಲಾಗಿದೆ.

ಹುಬ್ಬಳ್ಳಿಯಲ್ಲಿ ಪ್ರಾಚೀನ ಸಂಗ್ರಹಾಲಯ ಸ್ಥಾಪನೆ.

2876:(3861)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಿಣ): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕರ್ನಾಟಕದಲ್ಲಿರುವ ಪ್ರಾಚೀನ ಪರಂಪರೆಯನ್ನು ಪ್ರತಿಬಿಂಬಿಸುವ ಅನೇಕ ದೇವಾಲಯಗಳು, ವಿವಿಧ ಧಾರ್ಮಿಕ ಕೇಂದ್ರಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇವುಗಳ ಸಂರಕ್ಷಣೆ ಹಾಗೂ ಪ್ರಚಾರಕ್ಕಾಗಿ ಹುಬ್ಬಳ್ಳಿಯಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗುವುದೇ?